



# ಜಾನುವಾರುಗಳ ರಂಗೀಲಾ ಲೋಕ





■ ದಿಲಾವರ್ ರಾಮದುರ್ಗ
ಚಿತ್ರಗಳು: ದಿಲ್ ಮತ್ತು ಚಂದ್ರಶೇಖರ ಅತ್ತಿಬೆಲೆ

ಗ್ರಾಮೀಣ ಕರ್ನಾಟಕದ ಯಾವ ಪ್ರದೇಶಕ್ಕೆ ಹೋದರೂ ಕೃಷಿಕರಿಗೆ ಸಂಬಂಧಿಸಿದ ಸಂತೆ, ಜಾತ್ರೆ, ಮಾರುಕಟ್ಟೆ ಅತ್ಯಂತ ವರ್ಣರಂಜಿತ. ರಾಜ್ಯದ ಉತ್ತರ ಭಾಗದಲ್ಲಿ ಇದು ಅತ್ಯಂತ ಢಾಳಾಗಿ ಕಾಣಿಸುವಂಥದು. ರೈತರು ಜಾನುವಾರುಗಳನ್ನು ಹೊಲಗಳಲ್ಲಿ ದುಡಿಸಿಕೊಳ್ಳುವುದಷ್ಟೇ ನಮ್ಮ ಕಣ್ಣಿಗೆ ಕಾಣಿಸುತ್ತದೆ. ಆದರೆ ಅವುಗಳನ್ನು ತುಂಬ ಪ್ರೀತಿಯಿಂದ, ಕಕ್ಕುಲಾತಿಯಿಂದ ಕಾಣುವ ರೈತಾಪಿ ಜನರ ಕಾಳಜಿಯ ಪರಿ ನಮ್ಮ ಅರಿವಿಗೆ ಬರುವುದೇ ಇಲ್ಲ.

ದನಗಳಿಗೂ ಭಾವನೆಗಳಿರುತ್ತವೆ. ಅವುಗಳ ಜೊತೆಗಿನ ಮನುಷ್ಯನ ಭಾವನೆಗಳೂ ಇವೆ. ಒಬ್ಬ ರೈತ ತಾನು ಬಳಸುವ ಜಾನುವಾರುಗಳನ್ನು ಸಾಕಿ ಬೆಳೆಸುವ ಮತ್ತವುಗಳಿಗೆ ಅಲಂಕಾರ ಮಾಡಿ ಖುಷಿ ಪಡುವ ಪರಿಯೂ ಮನೋಜ್ಞವಾಗಿರುತ್ತದೆ.

(8ನೇ ಪುಟ ನೋಡಿ)